# ವೇದಾಂತ ಭವಿಷ್ಯದ ಧರ್ಮವಾಗಬಲ್ಲುದೆ ?

ಸ್ವಾಮಿ ಸುರೇಶಾನಂದ

**ವೇದಾಂತದ ಪರಮೋಚ್ಚ ಭಾವವನ್ನು ಸ್ವಾಮಿ ವಿವೇಕಾನಂದರು ಈ ಶೀರ್ಷಿಕೆಯ ಉಪನ್ಯಾಸದಲ್ಲಿ ವ್ಯಕ್ತಪಡಿಸಿರುವರು. ಅದನ್ನು ತಮ್ಮ ಲೇಖನದಲ್ಲಿ ಪ್ರತಿಬಿಂಬಿಸಿರುವ ಸ್ವಾಮಿ ಸುರೇಶಾನಂದಜಿಯವರು ಹಿಂದೆ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದು ಈಗ ಬಿಳಿಗಿರಿರಂಗನ ಬೆಟ್ಟದಲ್ಲಿ ವಿಶ್ರಾಂತ ಜೀವನವನ್ನು ನಡೆಸುತ್ತಿರುವರು.**



ಸ್ವಾಮಿ ವಿವೇಕಾನಂದರು ಎರಡನೆಯ ಬಾರಿಗೆ ಅಮೆರಿಕ ದೇಶಕ್ಕೆ ಹೋದಾಗ ೧೯೦೦ರ ಏಪ್ರಿಲ್ ಎರಡು ಸ್ಯಾನ್ ಫ್ರಾನ್ಸಿಸ್ಕೊ ನಗರದಲ್ಲಿ ಮೇಲಿನ ಶೀರ್ಷಿಕೆಯ ಕುರಿತಾಗಿ ಒಂದು ದೀರ್ಘ ಭಾಷಣವನ್ನು ಮಾಡಿದ್ದಾರೆ. ಮೊದಲ ಬಾರಿಗೆ ಅಮೆರಿಕ ದೇಶಕ್ಕೆ ಹೋದಾಗಲಾಗಲೀ ತಮ್ಮ ಜ್ಞಾನಯೋಗದ ಕುರಿತಾದ ಭಾಷಣಗಳಲ್ಲಾಗಲೀ ಇಷ್ಟೊಂದು ನಿರ್ದಾಕ್ಷಿಣ್ಯವಾಗಿ, ಯಾವ ಮತ, ಪಂಥ, ಧರ್ಮಗಳ ಹಂಗೂ ಇಲ್ಲದೆ, ಅವುಗಳನ್ನೆಲ್ಲ ಬಹಳ ಬಹಳ ದೂರವಿರಿಸಿ ಮಾತನಾಡಿರುವುದು ನಮಗೆ ಕಂಡುಬರುವುದಿಲ್ಲ. ಅಮೆರಿಕದಲ್ಲಿ ಮಾತನಾಡಿದ್ದಾದರೂ, ಇಡೀ ಜಗತ್ತಿನ ಜನರ ಮುಂದೆ ವೇದಾಂತಸಾರವನ್ನು ಮಂಡಿಸಿರುವುದು ಈ ಭಾಷಣದಲ್ಲಿ ವ್ಯಕ್ತವಾಗುತ್ತದೆ. ಅವರು ಮಹಾಸಮಾಧಿಯನ್ನೈದುವ ಕೇವಲ ಎರಡು ವರ್ಷಗಳ ಮುನ್ನ ಈ ಮಾತುಗಳನ್ನಾಡಿದ್ದಾರೆ. ಆಜೀವ ಪರ್ಯಂತವಾಗಿ ಅವರು ಮಾಡಿದ ಅಧ್ಯಯನ, ಆಳ ಚಿಂತನೆ, ತಪಸ್ಸು, ನಡೆಸಿದ ಪರಿಶುದ್ಧ ಜೀವನದಿಂದ ಮತ್ತು ಭಾವನೆಗಳಿಂದ ಬಂದ ಅನುಭವದ ಮಾತುಗಳಿವು ಎಂಬುದನ್ನು ನಾವಿಲ್ಲಿ ಗಮನಿಸಬೇಕು. ವೇದಾಂತ ಕೇಸರಿ ಎಂಬ ಬಿರುದು ಅವರಿಗೆ ಹೇಗೆ ಅನ್ವರ್ಥವಾಗುತ್ತದೆ ಎಂಬ ಸತ್ಯ ಈ ಉಪನ್ಯಾಸವನ್ನು ಓದಿದವರಿಗೆ ಮನದಟ್ಟಾಗುವುದರಲ್ಲಿ ಸಂಶಯವಿಲ್ಲ.

ಯಾರಾದರೂ ನಮಗೆ ಅರ್ಥವಾಗದ ರೀತಿಯಲ್ಲಿ ಧರ್ಮ, ಅಧ್ಯಾತ್ಮಗಳ ಕುರಿತು ಮಾತನಾಡಲು ಪ್ರಾರಂಭಿಸಿದರೆ ಸಾಕಪ್ಪ ನಿನ್ನ ವೇದಾಂತ ಎಂಬುದಾಗಿ ನಾವು ಹೇಳುವುದುಂಟು. ಹೆಚ್ಚಿನವರು 'ವೇದಾಂತ' ಶಬ್ದವನ್ನು ಅಳವಡಿಸಿಕೊಳ್ಳುವುದು ಅಂತಹ ಸಂದರ್ಭಗಳಲ್ಲಿ ಮಾತ್ರ. ಪರಮ ಧಾರ್ಮಿಕರಾದರೂ ಕೂಡ ವೇದಾಂತವನ್ನು ದೂರದಲ್ಲೇ ಇರಿಸುತ್ತಾರೆ. ವೇದಾಂತವನ್ನು ಗಂಭೀರವಾಗಿ ಪರಿಗಣಿಸಿದರೆ ತಲತಲಾಂತರದಿಂದ ಬಂದ ವೈಚಾರಿಕವಲ್ಲದ ನಂಬಿಕೆಗಳಿಗೆ ಮಾತ್ರ ಏಕೆ ನಾವು ಕಲ್ಪಿಸಿಕೊಂಡಿರುವ ನಮ್ಮ ಸಂಕುಚಿತ ವ್ಯಕ್ತಿತ್ವಕ್ಕೂ, ಅದನ್ನು ಕಾಪಾಡಲು ನಾವು ಮೊರೆಯಿಡುತ್ತಿರುವ ದೈವಕ್ಕೂ ಅದು ಕೊಡಲಿ ಪೆಟ್ಟಾಗಬಹುದು ಎನ್ನುವ ಅಂಜಿಕೆ ಜನರಲ್ಲಿದೆ ಎನ್ನುತ್ತಾರೆ ಸ್ವಾಮೀಜಿ.

ವೇದಾಂತತತ್ತ್ವದ ಸವಿಸ್ತಾರ ವಿಚಾರಸರಣಿ ನಮಗೆ ಕಂಡುಬರುವುದು ಉಪನಿಷತ್ತುಗಳಲ್ಲಿ. ಯಾವುದೇ ಒಂದು ಧರ್ಮದ, ಶಾಸ್ತ್ರಗಳಾಗಲೀ, ಉಪದೇಶಗಳಾಗಲೀ ಇಡೀ ಜಗತ್ತಿನ ಧರ್ಮ ಹೇಗಾಗಬಲ್ಲುದು? ಪ್ರತಿಯೊಂದು ಧರ್ಮದ ಪುರೋಹಿತಶಾಹಿಯ, ಧರ್ಮಪೀಠಗಳ, ಪ್ರಚಾರಕರ ಗತಿಯೇನು ಹಾಗಾದಲ್ಲಿ? ಮತಾಂತರವನ್ನೇ ಕಸುಬನ್ನಾಗಿಟ್ಟುಕೊಂಡಿರುವ ಧರ್ಮಗಳ –ಗುರುಗಳ ಪಾಡೇನು ಎನ್ನುವ ಪ್ರಶ್ನೆಗಳು ಉದ್ಭವಿಸುವುದು ಸಹಜ.

ವೇದಾಂತ ಎಂಬುದರ ಒಟ್ಟರ್ಥವೇನು ಎನ್ನುವುದನ್ನು ಸ್ವಲ್ಪದರಲ್ಲಿ ತಿಳಿದುಕೊಳ್ಳುವುದು ಸಾಂದರ್ಭಿಕ.

ಏನು ಜೀವನದರ್ಥ, ಏನು ಪ್ರಪಂಚಾರ್ಥ
ಏನು ಜೀವ ಪ್ರಪಂಚಗಳ ಸಂಬಂಧ
ಕಾಣದಿರ್ಪುದಿಲ್ಲೇನಾನುಮುಂಟೆ? ಅದೇಂ?
ಜ್ಞಾನ ಪ್ರಮಾಣವೇಂ?—ಮಂಕುತಿಮ್ಮ.

ಮೇಲಿನ ಪ್ರಶ್ನೆಗಳ ಕುರಿತಾದ ಆಳವಾದ ಅಧ್ಯಯನ, ಚಿಂತನೆ ಮತ್ತು ಅನುಭೂತಿಯಲ್ಲಿ ಪರ್ಯವಸಾನ ಇವುಗಳನ್ನು ವೇದಾಂತ ಎನ್ನಬಹುದೇನೊ. ಪರಮಾರ್ಥಸತ್ಯ ಒಂದಿದ್ದರೆ ಅದನ್ನು ನಮ್ಮ ಸೀಮಿತ ಬುದ್ಧಿಗೆ ತಿಳಿಸಿಕೊಡುವ ಪ್ರಯತ್ನವೂ ವೇದಾಂತವಾಗಬಹುದು. ಈ ಅರ್ಥದಲ್ಲಿ ವೇದಾಂತ ಯಾವ ಒಂದು ಧರ್ಮದ

ಗೊತ್ತೂ ಅಲ್ಲ. ಸತ್ಯಾನ್ವೇಷಣೆಯಲ್ಲಿ ಆಸಕ್ತರಾದವರೆಲ್ಲರಿಗೂ ಅವರು ಯಾವುದೇ ಮತ, ಪಂಥ, ಧರ್ಮಗಳಿಗೆ ಸೇರಿದವರಾದರೂ ಸರಿ. ಇಲ್ಲವೇ ಅವೆಲ್ಲವನ್ನೂ ಬಿಟ್ಟವರಿಗೂ ವೇದಾಂತ ಆದರಣೀಯವಾಗುತ್ತದೆ. ವಿದ್-ಜ್ಞಾನ ಎಂಬರ್ಥದಲ್ಲಿ ಎಲ್ಲ ಜ್ಞಾನಗಳ ಅಂತಿಮ ಗುರಿಯೇ ವೇದಾಂತ ಎನ್ನಬಹುದು. ಜ್ಞಾನಾರ್ಥಿ ಶಿಷ್ಯನೊಬ್ಬ ಗುರುವಿನ ಬಳಿ ಸಾರಿ ಯಾವುದನ್ನು ತಿಳಿದುಕೊಂಡರೆ ಸಕಲವನ್ನು ತಿಳಿದುಕೊಂಡಂತಾಗುತ್ತದೆ ಎಂದು ಕೇಳುತ್ತಾನೆ. ಅಂತಹದೊಂದಿದ್ದರೆ ಯಾರನ್ನು ತಾನೆ ಅದರಿಂದ ಹೊರತುಪಡಿಸುವುದು ಸಾಧ್ಯ? ಉಪನಿಷತ್ತುಗಳ ಅಧ್ಯಯನ ಮಾಡದೆಯೇ ಎಲ್ಲ ಕಾಲ, ದೇಶಗಳಿಗೆ ಸೇರಿದವರೂ ವೇದಾಂತ ತತ್ತ್ವವನ್ನು ಕಂಡುಕೊಳ್ಳಬಹುದು. ಇದು ಸಾರ್ವಕಾಲಿಕ ಸತ್ಯ, ನಿಮ್ಮೊಳಗೇ ಇರುವ ಸತ್ಯ ಎನ್ನುತ್ತಾರೆ ಸ್ವಾಮೀಜಿ. ಇಲ್ಲಿ ಜಿಜ್ಞಾಸೆ ತನ್ನನ್ನೇ ಕುರಿತಾದುದು.

> ಮೇಲು ಕೆಳಗುಗಳೆಲ್ಲ ವ್ಯಾಪಿಸಿ
> ಪಾಪಿಯಲ್ಲಿಯು ಸಂತನಲ್ಲಿಯು
> ದಿಟದ ತಿಳಿವಾಗಿರುವನೊ
> ಅವನನಾರಾಧಿಸುತ ಮುರಿದೆಸೆ
> ಮಿಕ್ಕಮೂರ್ತಿಗಳೆಲ್ಲವ ! – ಸ್ವಾಮಿ ವಿವೇಕಾನಂದ

ಬಹುತೇಕ ಧರ್ಮಗಳಿಗೆ ಶಾಸ್ತ್ರದ ಅವಶ್ಯಕತೆಯಿದ್ದರೂ, ಆ ಅಧ್ಯಯನದಿಂದ ಮನುಷ್ಯ ತನ್ನನ್ನು ದೈವತ್ವಕ್ಕೆ ಏರಿಸಿಕೊಳ್ಳುವಂತಾಗಬೇಕು, ಮನಃಶುದ್ಧಿಯಾಗಬೇಕು, ಹೃದಯವೈಶಾಲ್ಯ ಬರಬೇಕು, ನಿಃಸ್ವಾರ್ಥನಾಗಬೇಕು. ಕೇವಲ ಬಾಹ್ಯಪೂಜೆ, ಮತೀಯ ಕಟ್ಟುಕಟ್ಟಳೆಗಳ ಪಾಲನೆ ಮಾತ್ರ ಧರ್ಮಾಚರಣೆಯಾದರೆ, ಅದು ಮತಾಂಧತೆ, ಪರಧರ್ಮ ಅಸಹಿಷ್ಣುತೆಗಳಿಗೆ ಎಡೆ ಮಾಡಬಹುದು.

ಒಬ್ಬ ಯಹೂದ್ಯ ತನ್ನ ಧರ್ಮದಿಂದ ಕ್ರೈಸ್ತ ಮತಕ್ಕೆ ಮತಾಂತರಗೊಂಡು ಹೊಸ ಧರ್ಮದ ಪದ್ಧತಿಯಂತೆ ಭಾನುವಾರ ಚರ್ಚಿಗೆ ಪ್ರಾರ್ಥನೆ ಸಲ್ಲಿಸಲು ಹೋದ. ಪ್ರಾರ್ಥನೆ ಮುಗಿಸಿ ಹೊರಬರುವಾಗ ಭಿಕ್ಷುಕನೊಬ್ಬ ಕೈ ಚಾಚಿದ. ಈ ನವಕ್ರೈಸ್ತ ಅವನ ಕೆನ್ನೆಗೆ ಎರಡು ಬಾರಿಸಿದ. " ಭಿಕ್ಷೆ ಬೇಡಿದರೆ ನನಗೇಕೆ ಈ ಶಿಕ್ಷೆ" ಎಂದು ಕೇಳಿದ, ಭಿಕ್ಷುಕ. "ನೀವು ಪಾಪಿಗಳು, ನಮ್ಮ ಪ್ರಭುವನ್ನು ಶಿಲುಬೆಗೇರಿಸಿ ಕೊಂದಿದ್ದೀರಿ " ಎಂದು ಗರ್ಜಿಸಿದ ನವಕ್ರೈಸ್ತ. "ಸ್ವಾಮಿ, ಅದು ನಡೆದದ್ದು ಎರಡು ಸಾವಿರ ವರ್ಷಗಳ ಹಿಂದೆ. ಅದಕ್ಕೆ ನನಗೇಕೆ ಈಗ ಶಿಕ್ಷೆ? " ಎಂದು ಕೇಳಿದ ಭಿಕ್ಷುಕ. "ಹೌದು, ಅದಾದದ್ದು ಎರಡು ಸಾವಿರ ವರ್ಷಗಳ ಹಿಂದೆ. ಆದರೆ ನಾನದನ್ನು ಓದಿತಿಳಿದುಕೊಂಡದ್ದು ಮೊನ್ನೆ ಮೊನ್ನೆ (ಮತಾಂತರ ಗೊಂಡ ನಂತರ)." ಆತ ಪುಸ್ತಕ ಓದದಿದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು!

ಹುಟ್ಟಿದ ಮಕ್ಕಳೆಲ್ಲರೂ ಸ್ವಾಭಾವಿಕವಾಗಿಯೇ ಹೆತ್ತವರ ಮತ ಧರ್ಮಕ್ಕೆ ಸೇರಿದವರಾಗಿರುತ್ತಾರೆ. ಅವರಿಗೆ ಆ ಬಗ್ಗೆ ಸ್ವಾತಂತ್ರ್ಯವಿರುವುದಿಲ್ಲ. ಅಷ್ಟರಮಟ್ಟಿಗೆ ಅವರಿಗೆ ಧರ್ಮ ಸಂಕುಚಿತಗೊಳ್ಳುತ್ತದೆ. ಹೆತ್ತವರಿಂದ ಹಿರಿಯರಿಂದ ಸರಿಯಾದ ಮಾರ್ಗದರ್ಶನ ದೊರೆಯದಿದ್ದಲ್ಲಿ, ವ್ಯಕ್ತಿಯು ಧರ್ಮದ ಬಗೆಗೆ ಸಂಕುಚಿತ ಭಾವನೆ ಬೆಳೆಸಿಕೊಳ್ಳುತ್ತಾನೆ ಮತ್ತು ಪರಮತವನ್ನು ನಿಂದಿಸುತ್ತಾನೆ. ಒಂದು ಸಂಪ್ರದಾಯಕ್ಕೆ ಸೇರಿದ ಹುಡುಗನೊಬ್ಬ ಇನ್ನೊಂದು ಸಂಪ್ರದಾಯಕ್ಕೆ ಸೇರಿದ ಧರ್ಮಗುರುಗಳು ಮೆರವಣಿಗೆಯಲ್ಲಿ ಹೋಗುತ್ತಿದ್ದಾಗ ಅವರನ್ನು ಮನೆಯ ಮುಂದೆ ನಿಂದಿಸುತ್ತ ನಿಂತಿದ್ದ. ಹಿರಿಯರು, ಹಾಗೆ ಮಾಡಬಾರದಪ್ಪ, ಅವರು ದೊಡ್ಡವರು ಎಂದು ಬುದ್ಧಿವಾದ ಹೇಳಿದರೆ, ಅವರು ಬೇಕಾದರೆ ನಮ್ಮ ಧರ್ಮಗುರುಗಳನ್ನೂ ನಿಂದಿಸಲಿ, ಎಂದನಂತೆ !

ವೇದಾಂತ ತನ್ನ ತತ್ತ್ವಗಳನ್ನು ಯಾರಮೇಲೂ ಹೇರುವುದಿಲ್ಲ, ಮತಾಂತರಗೊಳಿಸುವುದಿಲ್ಲ. ಎಲ್ಲ ವಿಚಾರವಂತರಿಗೂ ಎಲ್ಲ ದೇಶ, ಕಾಲ, ಸಂಪ್ರದಾಯದವರಿಗೂ ಅಲ್ಲಿ ಪ್ರವೇಶವಿದೆ. ಒಬ್ಬ ಕ್ರೈಸ್ತ, ಮಹಮ್ಮದೀಯ, ಯಹೂದ್ಯ ಯಾರಾದರೂ ಸರಿ ತಮ್ಮ ಧರ್ಮವನ್ನು ಬಿಡದೆ, ಹಿಂದೂ ಆಗದೆ ವೇದಾಂತವನ್ನು ಅನುಷ್ಠಾನಕ್ಕೆ ತಂದುಕೊಳ್ಳಬಹುದು. ವೇದಾಂತದ ದೇವರು ಯಾರು? ಅದೊಂದು ತತ್ತ್ವ, ವ್ಯಕ್ತಿಯಲ್ಲ. ನೀವು, ನಾವು ಎಲ್ಲರೂ ಸಗುಣ ದೇವರು. ನಿಜವಾದ ದೇವರು ಅನಂತ ನಿರ್ಗುಣ. ಸದಾ ಕಾಲದಲ್ಲಿಯೂ ಇರುವವನು, ನಿರ್ವಿಕಾರಿ, ಅಮೃತನು. ನಾವೆಲ್ಲ ಅವನ ಅಭಿವ್ಯಕ್ತಿಗಳು, ಆತನ ವಿಗ್ರಹಗಳು. ಇದೇ ವೇದಾಂತದ ದೇವರು. ಆದರೂ ಸ್ವಾಮೀಜಿ ಬಹುಕಾಲದವರೆಗೆ ವೇದಾಂತ ವಿಶ್ವ ಧರ್ಮವಾಗುವ ಕುರಿತು ತಮ್ಮ ಸಂಶಯವನ್ನು ವ್ಯಕ್ತಪಡಿಸುತ್ತಾರೆ. ಅವರೆನ್ನುತ್ತಾರೆ:

"ಯಾರು ಕಳೆದ ಒಂದು ತಿಂಗಳಿಂದ ನನ್ನ ಉಪನ್ಯಾಸಗಳನ್ನು ಕೇಳುತ್ತಿದ್ದೀರೋ ಅವರಿಗೆಲ್ಲ ಇಷ್ಟು ಹೊತ್ತಿಗೆ ವೇದಾಂತದ ಭಾವನೆಗಳ ಪರಿಚಯವಾಗಿರಬಹುದು. ಜಗತ್ತಿನ ಅತಿ ಪುರಾತನ ಧರ್ಮವೇ ವೇದಾಂತ. ಆದರೆ ಇದು ಜನಸಾಮಾನ್ಯರಿಗೆ ಅರ್ಥವಾಗಿದೆ ಎಂದು ಹೇಳಲಾಗುವುದಿಲ್ಲ. ಆದ್ದರಿಂದ ಇದು ಭವಿಷ್ಯ ಧರ್ಮವಾಗಬಲ್ಲುದೆ ಎಂಬ ಪ್ರಶ್ನೆಗೆ ಉತ್ತರ ಕೊಡುವುದು ಬಹಳ ಕಷ್ಟ. ಇದಕ್ಕೆ ಕಾರಣ ಒಂದು ಧರ್ಮಕ್ಕೆ ಕೆಲವು ವಿಷಯಗಳು ಅಗತ್ಯ ಎಂಬುದು ನಿಮಗೆಲ್ಲ ಗೊತ್ತಿದೆ. ಮೊದಲನೆಯದು ಶಾಸ್ತ್ರ.... ಈ ಶಾಸ್ತ್ರದ ಶಕ್ತಿ ಅದ್ಭುತವಾದದ್ದು. ಅದು ಏನಾದರೂ ಆಗಿರಲಿ. ಮಾನವರೆಲ್ಲ ಒಟ್ಟು ಕಲೆತು ಗೌರವ ತೋರಿಸಬೇಕಾದರೆ ಅದು ಶಾಸ್ತ್ರಕ್ಕೆ ಮಾತ್ರ. ಶಾಸ್ತ್ರವಿಲ್ಲದ ಯಾವ ಧರ್ಮವೂ ಇಂದು ಉಳಿದಿಲ್ಲ. ಮಾನವಕೋಟಿ ಯುಕ್ತಿಯ ವಿಷಯವಾಗಿ ಬೇಕಾದಷ್ಟು ಮಾತಾಡಿದರೂ ಅವರೆಲ್ಲ ಶಾಸ್ತ್ರವನ್ನು ಅಪ್ಪಿಕೊಂಡಿರುವರು. ಯಹೂದ್ಯರನ್ನು ನೋಡಿ. ಅವರಲ್ಲೋ ಸ್ವಲ್ಪ ಜನ. ದೇಶದಿಂದ ದೇಶಕ್ಕೆ ಅವರನ್ನು ಅಟ್ಟುತ್ತಿರುವರು. ಆದರೂ ಅವರೆಲ್ಲ ಒಟ್ಟಿಗೆ ಇರುವರು. ಏಕೆಂದರೆ ಅವರಿಗೆ ಒಂದು ಶಾಸ್ತ್ರವಿದೆ....

"ಧರ್ಮಕ್ಕೆ ಬೇಕಾದ ಎರಡನೆಯ ಆವಶ್ಯಕತೆ ಗೌರವ ತೋರುವುದಕ್ಕೆ ಯಾರಾದರೂ ಇರಬೇಕು. ಅವನನ್ನು ದೇವನೆಂದೋ, ಮಹಾಪುರುಷನೆಂದೋ ಆರಾಧಿಸುತ್ತಾರೆ. ಮನುಷ್ಯರು ಯಾರಾದರೂ ಮನುಷ್ಯರನ್ನು ಆರಾಧಿಸಬೇಕಾಗಿದೆ. ಮಾನವರಿಗೆ, ಅವತಾರವೋ,

ದೇವದೂತನೋ, ಮಹಾನಾಯಕನೋ ಬೇಕಾಗಿದೆ. ಇಂದು ಇದನ್ನು ಎಲ್ಲ ಧರ್ಮಗಳಲ್ಲೂ ನೋಡುತ್ತೀರಿ. ಹಿಂದೂಗಳಲ್ಲಿ, ಕ್ರೈಸ್ತರಲ್ಲಿ ಅವತಾರಗಳಿವೆ. ಬೌದ್ಧರಲ್ಲಿ, ಮಹಮ್ಮದೀಯರಲ್ಲಿ ಮತ್ತು ಯಹೂದ್ಯರಲ್ಲಿ ದೇವದೂತರಿರುವರು. ಆದರೆ ಇದರ ಹಿಂದೆ ಇರುವ ಗೌರವಭಾವನೆ ಒಂದೇ....

"ಮೂರನೆಯ ಆವಶ್ಯಕತೆಯೇ, ಧರ್ಮವು ಬಲಿಷ್ಠವಾಗಿರಬೇಕಾದರೆ, ತನ್ನಲ್ಲಿ ಭರವಸೆ ಬರಬೇಕಾದರೆ ತಾನು ಹೇಳುವುದು ಮಾತ್ರ ಸತ್ಯ ಎಂದು ನಂಬುವುದು. ಇಲ್ಲದೆ ಇದ್ದರೆ ಅದು ತನ್ನ ಪ್ರಭಾವವನ್ನು ಬೀರಲಾರದು.... ಔದಾರ್ಯ (ಪರಮತ ಸಹಿಷ್ಣುತೆ) ನಮ್ಮನ್ನು ನಿಃಸ್ವಾರ್ಥರನ್ನಾಗಿ ಮಾಡಲು ಯತ್ನಿಸುತ್ತದೆ. ಆದರೆ ನಮಗೆ ನಿಃಸ್ವಾರ್ಥರಾಗಲು ಇಚ್ಛೆ ಇಲ್ಲ. ನಿಃಸ್ವಾರ್ಥತೆಯಿಂದ ಸದ್ಯಕ್ಕೆ ಏನೂ ಪ್ರಯೋಜನ ಕಾಣುವುದಿಲ್ಲ. ಒಬ್ಬ ಪ್ರವಾದಿ ಉದಯಿಸುವನು. ಯಾರು ತನ್ನನ್ನು ಅನುಸರಿಸುವರೋ ಅವರಿಗೆ ಎಲ್ಲ ಬಗೆಯ ಪುರಸ್ಕಾರಗಳು ದೊರಕುತ್ತವೆ ಎಂದೂ ಯಾರು ತನ್ನನ್ನು ಅನುಸರಿಸುವುದಿಲ್ಲವೋ ಅವರಿಗೆ ನಿತ್ಯನರಕ ಪ್ರಾಪ್ತಿ ಎಂದೂ ಸಾರುವನು. ಹರಡುತ್ತಿರುವ ಧರ್ಮಗಳಲ್ಲೆಲ್ಲ ಮತಾಂಧತೆ ಬಹಳ ಉಗ್ರವಾಗಿದೆ. ಒಂದು ಪಂಗಡ ಇನ್ನೊಂದು ಪಂಗಡವನ್ನು ಎಷ್ಟು ಉಗ್ರವಾಗಿ ಖಂಡಿಸಿದರೆ ಅಷ್ಟು ಜಯಶಾಲಿಯಾಗುವುದು. ಅಷ್ಟು ಹೆಚ್ಚು ಜನ ಅವರ ಗುಂಪಿಗೆ ಬರುವರು.

"ವೇದಾಂತ ಇದಾವುದನ್ನೂ ನಂಬುವುದಿಲ್ಲ. ಅದು ಯಾವ ಶಾಸ್ತ್ರವನ್ನೂ ನಂಬುವುದಿಲ್ಲ. ಅದೇ ಮೊದಲಿನ ತೊಡಕು. ಯಾವ ಶಾಸ್ತ್ರವೂ ಮತ್ತೊಂದು ಶಾಸ್ತ್ರಕ್ಕಿಂತ ಮೇಲು ಎಂದು ಹೇಳುವುದಿಲ್ಲ. ಯಾವುದೇ ಒಂದು ಗ್ರಂಥದಲ್ಲಿ ಮಾತ್ರ ದೇವರು, ಜೀವ ಮತ್ತು ಪ್ರಪಂಚ ಇವುಗಳ ರಹಸ್ಯತಮ ವಿಷಯ ಅಡಗಿದೆ ಎಂದು ಅದು ನಂಬುವುದಿಲ್ಲ. ಯಾರು ಉಪನಿಷತ್ತನ್ನು ಓದಿರುವರೋ ಅವರು 'ಶಾಸ್ತ್ರಾಧ್ಯಯನದಿಂದ ಆತ್ಮಸಾಕ್ಷಾತ್ಕಾರವಾಗುವುದಿಲ್ಲ' ಎಂದು ಮತ್ತೆ ಮತ್ತೆ ಸಾರುವುದನ್ನು ಗಮನಿಸಬಹುದು.

"ಇದಕ್ಕಿಂತ ಮತ್ತೊಂದು ದೊಡ್ಡ ಕಷ್ಟವೆಂದರೆ ದೇವರಿಗೆ ಸಂಬಂಧಪಟ್ಟದ್ದು.... ವೇದಾಂತದ ದೇವರು ಜನರಿಂದ ಬೇರೆಯಾಗಿ ಎಲ್ಲೋ ಸಿಂಹಾಸನದ ಮೇಲೆ ಮಂಡಿಸಿರುವ ಚಕ್ರವರ್ತಿಯಂತೆ ಅಲ್ಲ. ಕೆಲವರಿಗೆ ಇಂತಹ ದೇವರನ್ನು ಕಂಡರೆ ಇಷ್ಟ. ಎಂದರೆ ಅಂಜಿಕೊಳ್ಳುವುದಕ್ಕೊಬ್ಬನಿರಬೇಕು. ತೃಪ್ತಿಪಡಿಸುವುದಕ್ಕೊಬ್ಬನಿರಬೇಕು. ಅವನಿಗೆ ಮಂಗಳಾರತಿ ಎತ್ತುವರು. ಧೂಳಿನಲ್ಲಿ ಅವನೆದುರಿಗೆ ಹೊರಳಾಡುವರು. ಅವರನ್ನು ಆಳುವುದಕ್ಕೆ ಒಬ್ಬ ರಾಜನಿರಬೇಕು. ತೃಪ್ತಿಪಡಿಸುವುದಕ್ಕೆ ಒಬ್ಬನಿರಬೇಕು. ಸ್ವರ್ಗದಲ್ಲಿರುವ ಯಾವನೋ ದೊರೆ ತಮ್ಮನ್ನೆಲ್ಲ ಆಳುತ್ತಾನೆ ಎಂದು ನಂಬುವರು. ಈ ದೇಶದಿಂದಲಾದರೋ (ಅಮೆರಿಕ ದೇಶದಿಂದ) ರಾಜ ಹೋಗಿರುವನು. ಈಗ ಇಲ್ಲಿ ಸ್ವರ್ಗದ ರಾಜ ಎಲ್ಲಿರುವನು? ಪೃಥ್ವಿಯ ರಾಜ ಎಲ್ಲಿರುವನೋ ಅಲ್ಲಿರುವನು. ಈ ದೇಶದಲ್ಲಿ ರಾಜ ನಿಮ್ಮಲ್ಲಿ ಪ್ರತಿಯೊಬ್ಬರಲ್ಲೂ ಪ್ರವೇಶಿಸಿರುವನು (ಪ್ರಜಾಪ್ರಭುತ್ವ). ಇದರಂತೆಯೇ ವೇದಾಂತದ ದೇವರು ಕೂಡ. ನೀವೇ ದೇವತೆಗಳು. ಒಂದೇ ದೇವರು ಸಾಲುವುದಿಲ್ಲ. ನೀವೆಲ್ಲ ದೇವರು ಎನ್ನುವುದು ವೇದಾಂತ.

[ಅವಧೂತ ಗೀತೆಯಲ್ಲಿ (೨೭) ಬರುವ

ಶಿವಂ ನ ಜಾನಾಮಿ ಕಥಂ ವದಾಮಿ
ಶಿವಂ ನ ಜಾನಾಮಿ ಕಥಂ ಭಜಾಮಿ|
ಅಹಂ ಶಿವಶ್ಚೇತಿ ಪರಮಾರ್ಥತತ್ತ್ವಂ
ಸಮಸ್ವರೂಪಂ ಗಗನೋಪಮಂ ಚ ||

"ನಾನೇ ಪರಮಾರ್ಥತತ್ತ್ವನಾದ ಗಗನದಂತಿರುವ ಸಮಸ್ವರೂಪನಾದ ಶಿವನಾದರೆ, ನನ್ನಿಂದ ಬೇರೆ ಇರುವ ಶಿವ ನನಗೆ ಗೊತ್ತಿಲ್ಲ. ಆಗ ನಾನು ಅವನನ್ನು ಕುರಿತು ಪೂಜಿಸುವುದೆಂತು, ಮಾತನಾಡುವುದೆಂತು? " ಎಂಬ ಶ್ಲೋಕವನ್ನು ಸ್ವಾಮೀಜಿ ಪುನರುಚ್ಚರಿಸುತ್ತಿದ್ದಾರೆ ಎಂಬುದನ್ನು ನಾವಿಲ್ಲಿ ಗಮನಿಸಬಹುದು.]

> ಕಾಲಬದ್ಧವಾದ ಬುದ್ಧಿಗಾಗಿ ಪರತತ್ತ್ವವು ತೊಡುವ ಛದ್ಮವೇಷವೇ ಸಗುಣ ದೇವರು.
> – ಡಾ. ಎಸ್. ರಾಧಾಕೃಷ್ಣನ್

"ಇದರಿಂದ ಕಷ್ಟವಾಗುವುದು. ಇದು ಹಿಂದಿನ ದೇವರ ಭಾವನೆಯನ್ನು ಬೋಧಿಸುವುದಿಲ್ಲ. ಎಲ್ಲೋ ಮೋಡಗಳಾಚೆ ಕುಳಿತು ನಮ್ಮ ಇಚ್ಛೆಯನ್ನು ಕೇಳದೆ ಪ್ರಪಂಚವನ್ನು ನಡೆಸುತ್ತಿರುವ, ಅವನ ಇಚ್ಛೆಯಾಯಿತೆಂದು ನಮ್ಮನ್ನೆಲ್ಲ ಶೂನ್ಯದಿಂದ ಸೃಷ್ಟಿಸಿ ಈ ದುಃಖದ ಅನುಭವದ ಮೂಲಕ ಸಾಗಿಹೋಗುವಂತೆ ಮಾಡುವ ದೇವರನ್ನು ವೇದಾಂತ ಬೋಧಿಸದೆ, ಪ್ರತಿಯೊಬ್ಬರಲ್ಲೂ ಇರುವ, ಪ್ರತಿಯೊಂದು ವಸ್ತುವೂ, ಪ್ರತಿಯೊಂದು ವ್ಯಕ್ತಿಯೂ ಆಗಿರುವ ದೇವರನ್ನು ವೇದಾಂತ ಬೋಧಿಸುವುದು. ಚಕ್ರವರ್ತಿ ದೇಶದಿಂದ ನಿರ್ಗಮಿಸಿದ. ಹಾಗೆಯೇ ವೇದಾಂತದಲ್ಲಿ ಸ್ವರ್ಗದ ರಾಜ (ದೇವರು) ನೂರಾರು ವರ್ಷಗಳ ಹಿಂದೆಯೇ ಮಾಯವಾದ."

ಸ್ವಾಮೀಜಿ ಮತ್ತು ವೇದಾಂತ ಹೇಳುವ ದೇವರು ನಮ್ಮಲ್ಲೇ ಇರುವುದಾದರೆ, ನಾವು ಆತ್ಮವಾದರೆ, ನಮಗೇಕೆ ಹಾಗನಿಸುವುದಿಲ್ಲ? ಇದು ಅಜ್ಞಾನದಿಂದ ಎನ್ನುತ್ತದೆ ವೇದಾಂತ. ಅಜ್ಞಾನಕ್ಕೆ ಜ್ಞಾನವಲ್ಲದೆ ಬೇರೆ ಏನೂ ಪರಿಹಾರವಿಲ್ಲ. ಆದರೆ ಆತ್ಮಾನ್ವೇಷಣೆಗೆ ಹೊರಟ ವ್ಯಕ್ತಿ ಅದಕ್ಕೆ ಬರಬಹುದಾದ ಎಲ್ಲ ಅಡ್ಡಿ ಆತಂಕಗಳನ್ನು ಮೀರಿ ಹೋಗಲು ಸಿದ್ಧನಾಗಿರಬೇಕು. ನಿರಂಕುಶಮತಿಯಾಗಿರಬೇಕು. ತನ್ನ ಶರೀರ, ಇಂದ್ರಿಯ, ಮನಸ್ಸುಗಳೇ ಅಡ್ಡಿಯಾಗುವುದಾದರೆ ಅವೆಲ್ಲವನ್ನೂ ಮೀರಿಹೋಗಲು, ತ್ಯಜಿಸಲು ಆತ ಸಿದ್ಧನಿರಬೇಕು. ಆದರೆ ನಾವೆಲ್ಲ ಈ ಸೀಮಿತ ವ್ಯಕ್ತಿತ್ವದಿಂದಲೇ ತೃಪ್ತಿ ಹೊಂದುತ್ತಿದ್ದೇವೆ. ಸ್ವಾಮೀಜಿ ಶ್ರೀರಾಮಕೃಷ್ಣರು ಹೇಳುತ್ತಿದ್ದ ಕಥೆಯೊಂದನ್ನು ಇಲ್ಲಿ ಹೇಳುತ್ತಾರೆ. "ಹಿಂದೆ ಒಮ್ಮೆ ದೇವರು ವರಾಹ ಅವತಾರ ಮಾಡಿದನು, ರಾಕ್ಷಸನನ್ನು ಕೊಲ್ಲುವುದಕ್ಕಾಗಿ. ಅವನು ಒಂದು ಹೆಣ್ಣು ವರಾಹವನ್ನು ಮದುವೆಯಾಗಿ ಕೆಲವು ದಿನಗಳಲ್ಲಿ ಅವನಿಗೆ

ಮರಿಗಳೂ ಆದುವು. ಅವನು ತನ್ನ ಸಂಸಾರದೊಂದಿಗೆ ಕೆಸರಿನಲ್ಲಿ ಆಡುತ್ತ ತನ್ನ ಮಹಾತ್ಮೆಯನ್ನು, ಈಶ್ವರತ್ವವನ್ನು ಮರೆತು ಆನಂದವಲ್ಲಿದ್ದನು. ಇತರ ದೇವತೆಗಳಿಗೆ ತುಂಬ ಚಿಂತೆ ಯಾಯಿತು. ಅವರೆಲ್ಲ ಭೂಲೋಕಕ್ಕೆ ಬಂದು ನಿನ್ನ ಹಂದಿಯ ದೇಹವನ್ನು ತ್ಯಜಿಸಿ ದೇವಲೋಕಕ್ಕೆ ಬಾ ಎಂದು ಬೇಡಿಕೊಂಡರು. ಆದರೆ ದೇವರಿಗೆ ಇದಾವುದೂ ಹಿಡಿಸಲಿಲ್ಲ. ಅವರನ್ನು ಓಡಿಸಿ ಬಿಟ್ಟನು. "ನಾನೀಗ ಆನಂದದಲ್ಲಿರುವೆನು. ನನ್ನ ಸುಖಕ್ಕೆ ಭಂಗ ತರಬೇಡಿ" ಎಂದನು. ಬೇರೆ ದಾರಿಯೇ ಇಲ್ಲದೆ ಆಗ ದೇವತೆಗಳು ದೇವರ ಹಂದಿಯ ರೂಪವನ್ನು ಸಂಹರಿಸಿದರು. ತಕ್ಷಣ ದೇವರಿಗೆ ತನ್ನ ಮಾಹಾತ್ಮ್ಯೆಯ ಅರಿವಾಯಿತು. ಹಂದಿಯ ಜನ್ಮದಲ್ಲಿ ತನಗೆ ಹೇಗೆ ತೃಪ್ತಿಯುಂಟಾಗಿತ್ತು ಎಂದು ಆಗ ಅವನಿಗೆ ಆಶ್ಚರ್ಯವಾಯಿತು. ಜನರು ಹೀಗೆಯೇ ವ್ಯವಹರಿಸುವರು. ಅವರು ನಿರ್ಗುಣ ದೇವರ ಹೆಸರನ್ನು ಕೇಳಿದೊಡನೆಯೇ "ಹಾಗಾದರೆ ತನ್ನ ವ್ಯಕ್ತಿತ್ವ ಏನಾಗುವುದು, ಅದು ಹೋಗುವುದಲ್ಲ" ಎಂದು ವ್ಯಥೆ ಪಡುವರು. ನಿಮಗೆ ಪುನಃ ಆ ಆಲೋಚನೆ ಬಂದಾಗ ಈ ಹಂದಿ ಯನ್ನು ಜ್ಞಾಪಿಸಿಕೊಳ್ಳಿ."

ಮನುಷ್ಯ ತನ್ನನ್ನು ಪ್ರೀತಿಸುವಷ್ಟು ಇನ್ನಾವುದನ್ನೂ ಪ್ರೀತಿಸು ವುದಿಲ್ಲ. ಇದನ್ನು ಮನಃಶಾಸ್ತ್ರಜ್ಞರೂ ಒಪ್ಪುತ್ತಾರೆ. ಧನ, ಅಧಿಕಾರ, ಸಂಸಾರ ಎಲ್ಲವೂ ತನ್ನ ಭೋಗಕ್ಕಾಗಿ, ಸುಖಕ್ಕಾಗಿ. ತನ್ನ ಅಳಿವಿನ ಪ್ರಶ್ನೆ ಬಂದಾಗ ಅವನಿಗೆ ಭಯ ಉಂಟಾಗುತ್ತದೆ. ಆದರೆ ಅವನ ಅಧಿಕಾರ, ಸಂಪತ್ತು, ಕುಟುಂಬ ಯಾವುದೂ ಈ ಸಮಸ್ಯೆಯನ್ನು ಪರಿಹರಿಸಲು ಅಸಮರ್ಥ. ಉಪನಿಷತ್ತಿನಲ್ಲಿ ಒಂದು ಕಡೆ ಬಾಲಕನೊಬ್ಬ ಯಮನನ್ನೇ ಕುರಿತು, "ಮನುಷ್ಯ ಸತ್ತಾಗ ಏನಾಗುತ್ತಾನೆ ಎಂಬ ಈ ಒಂದು ಸಂಶಯವಿದೆ. ಆಮೇಲೂ ಅವನಿರುತ್ತಾನೆ ಎನ್ನುವರು ಕೆಲವರು, ಅವನಿರುವುದಿಲ್ಲ ಎನ್ನುತ್ತಾರೆ ಇನ್ನೂ ಕೆಲವರು. ಇದನ್ನು ನನಗೆ ತಿಳಿಯಹೇಳು" ಎಂದು ಕೇಳಿಕೊಳ್ಳುತ್ತಾನೆ. ದೇವರ ಬಗ್ಗೆ ಕೆಲವರಿಗೆ ಆಸಕ್ತಿ ಇರಬಹುದು, ಇಲ್ಲದಿರಬಹುದು. ಆದರೆ ತನ್ನ ಹಿತಚಿಂತನೆಯ ಬಗ್ಗೆ, ಅಸ್ತಿತ್ವದ ಬಗ್ಗೆ ಎಲ್ಲರೂ ಆಸಕ್ತರಾಗಿದ್ದಾರೆ. ಉಪನಿಷತ್ತುಗಳು ಹೆಚ್ಚಿನ ಮಟ್ಟಿಗೆ ಈ ವ್ಯಕ್ತಿತ್ವದ ವಿಶ್ಲೇಷಣೆ ಮಾಡುತ್ತದೆ. ಇದು ಪರಮಾರ್ಥ ದೃಷ್ಟಿಯಲ್ಲಿ ವ್ಯಕ್ತಿಯಲ್ಲ ತತ್ತ್ವ ಎಂದು ಸಾರುತ್ತದೆ. ಉಪನಿಷತ್ತುಗಳೆಲ್ಲ ಆತ್ಮನ ನಿಜಸ್ವರೂಪವನ್ನು ನಿರೂಪಣೆ ಮಾಡುವುದರಲ್ಲೇ ಪರ್ಯವಸಾನವಾಗುತ್ತವೆ ಎನ್ನುತ್ತಾರೆ ಶಂಕರಾ ಚಾರ್ಯರು. ದೇವರಿಲ್ಲ ಎಂಬ ವಾದವನ್ನು ಮುಂದೊಡ್ಡುವ ನಾಸ್ತಿಕರೂ ಈ ವಿಮರ್ಶೆ ಮಾಡುವುದರಲ್ಲಿ ಆಸಕ್ತರಾಗಬಹುದು. ದೇವರಿಲ್ಲವೆಂದು ಸಾರುವ ವ್ಯಕ್ತಿಯಾದರೂ ಇರಲೇಬೇಕಲ್ಲ. ಇದು ಬರಿಯ ಶಾಸ್ತ್ರವಿಷಯವಲ್ಲ. ಆತ್ಮನ ಅಸ್ತಿತ್ವವನ್ನೂ ಅಮರತ್ವ ವನ್ನೂ ಸಾರುವುದಕ್ಕೆ ಬರಿಯ ಪುಸ್ತಕವೊಂದೇ ಅಲ್ಲ, ಅದಕ್ಕಿಂತ ಮುಖ್ಯವಾಗಿ ಸ್ವಾನುಭವವೇ ಅಂತಿಮ ಆಧಾರ. ಶಾಸ್ತ್ರ ಅಥವಾ ವಿಚಾರವು ನಮ್ಮ ಕುರಿತಾದ ತಪ್ಪುಕಲ್ಪನೆಗಳನ್ನು ನಿವಾರಿಸಲು ಅನುವಾದೀತು.

ಆತ್ಮ ವಸ್ತುತಂತ್ರ, ಪುರುಷತಂತ್ರವಲ್ಲ ಎನ್ನುತ್ತಾರೆ ಶಂಕರಾ ಚಾರ್ಯರು. ಒಂದು ಕರ್ಮವನ್ನು ನಮಗೆ ಇಚ್ಛೆ ಇದ್ದರೆ ಮಾಡ ಬಹುದು, ಇಲ್ಲದಿದ್ದಲ್ಲಿ ಬಿಡಬಹುದು, ಅಥವಾ ಅದನ್ನು ಬೇರೆ ರೀತಿಯಲ್ಲಿ ಮಾಡಬಹುದು. ಆದರೆ ಜ್ಞಾನ ಹಾಗಲ್ಲ. ವಸ್ತು ಹೇಗಿದೆಯೋ ಹಾಗೆ ನಮಗೆ ಕಾಣಿಸಿಕೊಳ್ಳುತ್ತದೆ. ಬೇರೆ ರೀತಿ ಕಂಡಲ್ಲಿ ಅದು ಭ್ರಮೆಯಾದೀತು, ಪ್ರಮೆಯಲ್ಲ. ಆತ್ಮಜ್ಞಾನ ಉದಯಿಸಿದಾಗ ಪ್ರಪಂಚ ಹಾಗೂ ನಮ್ಮ ವ್ಯಕ್ತಿತ್ವ ಇರುವುದಿಲ್ಲ ಎಂದಲ್ಲ, ಇದೆಲ್ಲದರ ಕುರಿತ ತಪ್ಪು ಕಲ್ಪನೆಗಳು ಹೋಗುತ್ತವೆ. ಇವೆಲ್ಲದರ ಹಿನ್ನೆಲೆಯಲ್ಲಿರತಕ್ಕ, ತ್ರಿಕಾಲದಲ್ಲೂ ಅಬಾಧಿತವಾದ ಸತ್ಯ ಒಂದೇ ಎಂಬ ಅರಿವಾಗುತ್ತದೆ ಎನ್ನುತ್ತದೆ ವೇದಾಂತ. "ನಾನು ಕಣ್ಣು ಮುಚ್ಚಿದಾಗಲೂ ಆ ಪರಬ್ರಹ್ಮ ವಸ್ತುವನ್ನೇ ಕಾಣುತ್ತೇನೆ. ಕಣ್ಣು ತೆರೆದಾಗಲೂ ಅದೇ ಪರಬ್ರಹ್ಮವನ್ನು ನೋಡುತ್ತೇನೆ" ಎನ್ನುತ್ತಾರೆ ರಾಮಕೃಷ್ಣ ಪರಮಹಂಸರು. ಇದು ಜ್ಞಾನದ ಪರಾಕಾಷ್ಠೆ.

> ಧರ್ಮದ ಶಿಶುವಿಹಾರಗಳನ್ನೆಲ್ಲ ತ್ಯಜಿಸುವ ಮಹಾನ್ ವ್ಯಕ್ತಿಗಳು ಉದಿಸುವ ಕ್ಷಣವೊಂದು ಬರುತ್ತದೆ. ಅವರು ಆತ್ಮವನ್ನು ಆತ್ಮದಿಂದ ಪೂಜಿಸುವ ಸತ್ಯವಾದ ಧರ್ಮವನ್ನು ಸ್ಪಷ್ಟವೂ ಶಕ್ತಿಯುತವೂ ಆದುದನ್ನಾಗಿ ಮಾಡುತ್ತಾರೆ.
>
> —ಸ್ವಾಮಿ ವಿವೇಕಾನಂದ.

ಮುಂದುವರಿಯುತ್ತ ಸ್ವಾಮೀಜಿ ಎನ್ನುತ್ತಾರೆ "ಪ್ರಶ್ನೆಯ ಮತ್ತೊಂದು ಭಾಗವಿದೆ. ಶ್ರೇಷ್ಠವಾದ ಪರಮ ಸತ್ಯವನ್ನು ಎಲ್ಲರೂ ಏಕಕಾಲದಲ್ಲಿ ಸಾಕ್ಷಾತ್ಕಾರ ಮಾಡಿಕೊಳ್ಳಲಾರರು. ಅವರನ್ನು ಪೂಜೆ, ಪ್ರಾರ್ಥನೆ ಮುಂತಾದವುಗಳ ಮೂಲಕ ಕರೆದುಕೊಂಡು ಹೋಗಬೇಕು ಎನ್ನುವರು. ಇದು ಸರಿಯಾದ ಮಾರ್ಗವೇ ಅಲ್ಲವೇ ಎಂಬುದು ನನಗೆ ಗೊತ್ತಿಲ್ಲ. ನಾನು ಭರತಖಂಡದಲ್ಲಿ ಎರಡನ್ನೂ ಮಾಡು ತ್ತೇನೆ. ದೇವರು, ವೇದ, ಬೈಬಲ್, ಕ್ರಿಸ್ತ, ಬುದ್ಧ ಇವರ ಹೆಸರಿನಲ್ಲಿ ಕಲಕತ್ತದಲ್ಲಿ ವಿಗ್ರಹಗಳು ಮತ್ತು ದೇವಸ್ಥಾನಗಳಿವೆ. ಆದರೆ ಇದನ್ನೂ ಪ್ರಯತ್ನಿಸಿ ನೋಡೋಣ. ಹಿಮಾಲಯದಲ್ಲಿ ಒಂದು ಸ್ಥಳವಿದೆ. ಅಲ್ಲಿ ಸತ್ಯವಲ್ಲದೆ ಬಾಹ್ಯಪೂಜೆಗಳಾವುವೂ ಪ್ರವೇಶಿಸ ಕೂಡದೆಂದು ನಾನು ಸಂಕಲ್ಪ ಮಾಡಿರುವೆನು. ನಾನು ನಿಮಗೆ ಇಂದು ಹೇಳಿದ ವಿಷಯವನ್ನು ಅನುಷ್ಠಾನಕ್ಕೆ ತರಲು ಯತ್ನಿಸುವೆನು..... ಅಲ್ಲಿ ಭಗವಂತನ ಮಕ್ಕಳಾದ ಸತ್ಯೋಪಾಸಕರು ಯಾವ ಅಂಜಿಕೆಯೂ ಇಲ್ಲದೆ ಮತ್ತು ಮೂಢನಂಬಿಕೆಯ ಭಯವಿಲ್ಲದೆ ಮುಂದು ವರಿಯಲಿ ಎಂಬುದೇ ನನ್ನ ಆಸೆ" ಅಂತಹ ಸ್ಥಳವೊಂದನ್ನು ಹಿಮಾ ಲಯದಲ್ಲಿ ಸ್ಥಾಪಿಸುವುದರಲ್ಲಿ ಸ್ವಾಮೀಜಿ ಯಶಸ್ವಿಯಾದರು. ಅದು ಇಂದಿಗೂ ಸ್ವಾಮಿಜಿಯವರ ಆದೇಶದಂತೆ ನಡೆದುಬರುತ್ತಿದೆ. ಅದರ ಹೆಸರೇ ಅದ್ವೈತ ಆಶ್ರಮ ಎಂಬುದಾಗಿ.

ಸ್ಥಳದಾನ : ಡಾ. (ಕ್ಯಾಪ್ಟನ್) ಕಿರಣ್ ನಾಗರಾಜ್, ಬೆಂಗಳೂರು